# <u>ಜೆಎಸ್‌ಎಸ್ ಮಹಿಳಾ ಕಾಲೇಜು,ಕೊಳ್ಳೇಗಾಲ</u>

ಪ್ರಕಟಣೆಯ ಕೃಪೆಗಾಗಿ

ದಿನಾಂಕ : 17-07-2018

**ಜೆಎಸ್‌ಎಸ್‌ನಲ್ಲಿ ಪ್ರತಿಭಾನ್ವೇಷಣೆ ಕಾರ್ಯಕ್ರಮ**

**ಸಹಪಠ್ಯ ಚಟುವಟಿಕೆಗಳು ಆತ್ಮ ವಿಶ್ವಾಸದ ಮಜಲುಗಳು : ಪ್ರೊ. ದೀಪ ಎಸ್ ಆರ್**

ಕೊಳ್ಳೇಗಾಲ: 17-07-2018 : ಓದು ಬುದ್ಧಿಗೆ ಸೋಪಾನವಾದರೆ, ಸಹಪಠ್ಯ ಚಟುವಟಿಕೆಗಳು ಆತ್ಮ ವಿಶ್ವಾಸದ ಮಜಲುಗಳು, ಸಹ ಪಠ್ಯ ಚಟುವಟಿಕೆಗಳಾದ, ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಚರ್ಚೆ, ಬರಹಗಳಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಸಹಜವಾಗಿ ಜೀವನದಲ್ಲಿ ಯಶಸ್ಸು ಕಂಡಿರುವುದನ್ನು ಗಮನಿಸಬಹುದಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಎಸ್ ಆರ್ ದೀಪ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ 2018-19ನೇ ಸಾಲಿನ ಪ್ರತಿಭಾನ್ವೇಷಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಸವಾಲಾಗಿದೆ. ವಿಜ್ಞಾನ ಜಗತ್ತಿನ ಉಸಿರಾಗಿದ್ದರೂ ವಿಜ್ಞಾನವು ವಿವೇಚನೆಯುಳ್ಳ ಜ್ಞಾನವಾಗಬೇಕೇ ಹೊರತು ವಿವೇಚನಾರಹಿತ ಜ್ಞಾನವಾಗಬಾರದು. ವಿದ್ಯಾರ್ಥಿ ಸಮೂಹ ಯಾವುದೇ ಪದವಿ ಶಿಕ್ಷಣ ಪಡೆಯುವುದರ ಜೊತೆಗೆ ತಮ್ಮ ತಮ್ಮ ಉತ್ತಮ ಸಂಸ್ಕೃತಿಯನ್ನು ಮರೆಯಬಾರದು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಜಗತ್ತಿನಲ್ಲಿ ಯಾರೂ ನಿಷ್ಪ್ರಯೋಜಕರಲ್ಲ. ಯಾವುದೂ ನಿಷ್ಪ್ರಯೋಜಕವಲ್ಲ. ಪ್ರತಿಯೊಬ್ಬರಲ್ಲಿಯೂ ಒಂದಲ್ಲ ಒಂದು ಶಕ್ತಿ ಸಾಮರ್ಥ್ಯ, ಪ್ರತಿಭೆ, ಪಾಂಡಿತ್ಯ ಇದ್ದೇ ಇರುತ್ತದೆ. ಆದರೆ ಅವರವರ ಸುಪ್ತ ಶಕ್ತಿ ಸಾಮರ್ಥ್ಯಗಳ ಅರಿವಿರುವುದಿಲ್ಲ. ವಿದ್ಯಾರ್ಥಿಗಳಲ್ಲಡಗಿರುವ ಅಂತಹ ಸಾಮರ್ಥ್ಯವನ್ನು ಹುಡುಕಿ ಹೊರತೆಗೆಯಲು ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಭಯ, ಸಂಕೋಚ ಹೊಂದದೆ ನಿಮ್ಮ ಪ್ರತಿಭೆಯನ್ನು ಹೊರಹಾಕಲು ಈ ವೇದಿಕೆಯನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕರೆ ನೀಡುತ್ತ ಮನೆ ಕಟ್ಟಲು ಇಟ್ಟಿಗೆಗಳನ್ನು ಒಟ್ಟಿಗೊಟ್ಟಿಗೆ ಇಡವ ಹಾಗೆ ಮನೆಗಳನ್ನು ನಡೆಸಲು ಮನಗಳನ್ನು ಒಟ್ಟಿಗೊಟ್ಟಿಗೆ ಸೇರಿಸಬೇಕಾಗುತ್ತದೆ, ಈ ಸತ್ಯವನ್ನು ಅರಿತರೆ ಮನೆ ಹಾಗೂ ಮನಸ್ಸುಗಳು ಆನಂದ ಭರಿತವಾಗಿರುತ್ತವೆ ಎಂದು ತಿಳಿಸಿದರು.

ಸಾಂಸ್ಕೃತಿಕ ವೇದಿಕೆ ಸಂಚಾಲಕಿ ಶ್ರೀಮತಿ ಭ್ರಮರಾಂಭ, ಶ್ರೀಮತಿ ಕೆ ಆರ್ ಉಮಾದೇವಿ, ಶ್ರೀಮತಿ ಎ ಎಸ್ ಸ್ಮಿತಾ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ಅನುಪಮ ಎಂ ಸ್ವಾಗತಿಸಿ, ಕು. ಹರ್ಷಿತ ಎಂ ವಂದಿಸಿದರು.

2018–19ನೇ ಸಾಲಿನ ಪ್ರತಿಭಾನ್ವೇಷಣಾ ಕಾರ್ಯಕ್ರಮ. ವೇದಿಕೆಯಲ್ಲಿ ಶ್ರೀಮತಿ ಎ ಎಸ್ ಸ್ಮಿತಾ, ಶ್ರೀಮತಿ ಎಸ್ ಆರ್ ದೀಪಾ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀಮತಿ ಕೆ ಆರ್ ಉಮಾದೇವಿ ಹಾಗೂ ಸಂಚಾಲಕಿ ಶ್ರೀಮತಿ ಎನ್ ಭ್ರಮರಾಂಭರವರನ್ನು ಕಾಣಬಹುದು.




2018–19ನೇ ಸಾಲಿನ ಪ್ರತಿಭಾನ್ವೇಷಣಾ ಕಾರ್ಯಕ್ರಮವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಎಸ್ ಆರ್ ದೀಪ ರವರು ಉದ್ಘಾಟಿಸುತ್ತಿರುವುದು. ವೇದಿಕೆಯಲ್ಲಿ ಶ್ರೀಮತಿ ಎ ಎಸ್ ಸ್ಮಿತಾ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀಮತಿ ಕೆ ಆರ್ ಉಮಾದೇವಿ ಹಾಗೂ ಸಂಚಾಲಕಿ ಶ್ರೀಮತಿ ಎನ್ ಭ್ರಮರಾಂಭರವರನ್ನು ಕಾಣಬಹುದು.



2018–19ನೇ ಸಾಲಿನ ಪ್ರತಿಭಾನ್ವೇಷಣಾ ಕಾರ್ಯಕ್ರಮವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಎಸ್ ಆರ್ ದೀಪ ರವರು ಮಾತನಾಡುತ್ತಿರುವುದು. ವೇದಿಕೆಯಲ್ಲಿ ಶ್ರೀಮತಿ ಎ ಎಸ್ ಸ್ಮಿತಾ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀಮತಿ ಕೆ ಆರ್ ಉಮಾದೇವಿ ಹಾಗೂ ಸಂಚಾಲಕಿ ಶ್ರೀಮತಿ ಎನ್ ಭ್ರಮರಾಂಭರವರನ್ನು ಕಾಣಬಹುದು.



ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರುಗಳು

